**ದಿನಾಂಕಃ 31.01.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಡಿಕ್ರಿದಾರರ ಪರ ವಕೀಲರಿಂದಃ**

2. ನನ್ನ ತಾತನ ಹೆಸರು ಗಡ್ಡಿ ಶಿವನಗೌಡ. ನನ್ನ ಅಜ್ಜಿಯ ಹೆಸರು ಗಡ್ಡಿ ಅನಸೂಯಮ್ಮ. ನನ್ನ ತಂದೆಗೆ 6 ಜನ ಅಣ್ಣ-ತಮ್ಮಂದಿರು ಇರುತ್ತಾರೆ. ನನ್ನ ತಂದೆ ಗಡ್ಡಿ ನಾಗರಾಜ ಮತ್ತು ಅವರ ಸಹೋದರರು ಎಷ್ಟು ಬಾರಿ ಪಾಲುವಿಭಾಗ ಮಾಡಿಕೊಂಡಿದ್ದಾರೆ? ಎಂದರೆ ಒಂದೇ ಬಾರಿ ಪಾಲುವಿಭಾಗ ಮಾಡಿಕೊಂಡಿದ್ದರು. ನನ್ನ ಮಧ್ಯಂತರ ಅರ್ಜಿ 2 ರಲ್ಲಿ ನನ್ನ ತಂದೆಯ ಸಹೋದರರು 3 ಬಾರಿ ನೋಂದಾಯಿತ ಪಾಲುವಿಭಾಗಗಳನ್ನು ಮಾಡಿಕೊಂಡಿದ್ದಾರೆಂದು ನಾನು ಬರೆಯಿಸಿಲ್ಲ. ನನ್ನ ಸಾಕ್ಷಿ ವಿಚಾರಣೆಯಲ್ಲಿ ನಾನು ಒಟ್ಟು 3 ನೋಂದಾಯಿತ ಪಾಲುವಿಭಾಗ ಪತ್ರಗಳನ್ನು ನಿಡಿ 1 ರಿಂದ ನಿಡಿ 3 ರಂತೆ ಹಾಜರು ಮಾಡಿದ್ದೇನೆ ಎಂದರೆ ಸಾಕ್ಷಿಯು ನನಗೆ 2019ರ ಪಾಲುವಿಭಾಗದ ಬಗ್ಗೆ ಮಾತ್ರ ಗೊತ್ತು ಎಂದು ಹೇಳಿದ್ದಾರೆ ನಾನು ವಿದ್ಯಾಭ್ಯಾಸ ಮಾಡಿಲ್ಲ. ನಿಡಿ 1 ವಿಭಾಗ ಪತ್ರದಲ್ಲಿ ಆ ದಾಖಲೆಯಲ್ಲಿರುವ ಆಸ್ತಿಗಳು ಗಡ್ಡಿ ಅನಸೂಯಮ್ಮನ ಹೆಸರಿನಲ್ಲಿ ಪಟ್ಟಾ ಇರುವ ಆಸ್ತಿಗಳು ಎಂದು ನಮೂದಾಗಿದೆ ಎಂದರೆ ಸರಿ. ಗಡ್ಡಿ ಅನಸೂಯಮ್ಮ ಈಗಲೂ ಜೀವಂತ ಇದ್ದಾರೆ. ನಿಡಿ 1 ರಲ್ಲಿ ಸದರಿ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಲ್ಲ ಅವು ಅವಿಭಕ್ತ ಕುಟುಂಬದ ಆಸ್ತಿಗಳು ಎಂದು ನಮೂದು ಮಾಡಿದ್ದಾರೆ ಎಂದರೆ ಅವು ಪಿತ್ರಾರ್ಜಿತ ಆಸ್ತಿಗಳೇ ಆಗಿರುತ್ತವೆ. ನಾನು ಪಿತ್ರಾರ್ಜಿತ ಆಸ್ತಿಗಳೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 3 ಪಾಲುವಿಭಾಗ ಪತ್ರದಲ್ಲಿನ ಆಸ್ತಿಗಳನ್ನು ಮಾತ್ರ ಪಿತ್ರಾರ್ಜಿತ ಎಂದು ತೋರಿಸಿದ್ದಾರೆ ಎಂದರೆ ಸರಿ. ದಿನಾಂಕ 13.05.2019 ರಲ್ಲಿ ಮಾಡಿಕೊಂಡ ಪಾಲುವಿಭಾಗ ಪತ್ರ ನಿಡಿ 2 ರಲ್ಲೂ ಅವಿಭಕ್ತ ಕುಟುಂಬದ ಆಸ್ತಿಗಳೆಂದು ನಮೂದು ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ನಿಡಿ 1 ರಿಂದ ನಿಡಿ 3ರ ದಾಖಲೆಗಳನ್ನು ಪರಿಶೀಲಿಸಿ ಅರ್ಥ ಮಾಡಿಕೊಂಡ ನಂತರವೇ ಹಾಜರು ಮಾಡಿದ್ದೇನೆ ಎಂದರೆ ಸರಿ.

3. ಈ ಅಮಲ್ಜಾರಿ ಶೆಡ್ಯೂಲ್ ಆಸ್ತಿ 26 ಸೆಂಟ್ಸ್ ಜಮೀನನ್ನು ನನ್ನ ತಂದೆ, ನನ್ನ ತಾಯಿ ಮತ್ತು ನನ್ನ ಅಣ್ಣ ಡಿಕ್ರಿದಾರರಿಗೆ ಮಾರಾಟ ಮಾಡಿದ್ದಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ದಿನಾಂಕ 17.09.2018 ರಂದು ಡಿಕ್ರಿದಾರರಿಂದ ನನ್ನ ತಂದೆ ರೂ. 18 ಲಕ್ಷ ಮೊತ್ತಕ್ಕೆ ಮಾರಾಟ ಮಾಡಲು ಒಪ್ಪಿ ರೂ. 17 ಲಕ್ಷ 50 ಸಾವಿರವನ್ನು ಮುಂಗಡವನ್ನು ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ತೀರ್ಪು ಋಣಿಗಳು ಮೂವರೂ ಬಾಕಿ ರೂ. 50 ಸಾವಿರ ಪಡೆದುಕೊಂಡು ಡಿಕ್ರಿದಾರರಿಗೆ ಕ್ರಯ ಪತ್ರ ಮಾಡಿ ಕೊಡುವುದಾಗಿ ಒಪ್ಪಿದ್ದರು ಎಂದರೆ ಸುಳ್ಳು . ಡಿಕ್ರಿದಾರರಿಗೆ ಕ್ರಯಪತ್ರ ಮಾಡಿಕೊಡಲಿಲ್ಲವಾದ್ದರಿಂದ ಅವರು ನೋಟೀಸ್ ನೀಡಿ ನಂತರ ಓ.ಎಸ್. ನಂ. 43/2019 ನ್ನು ದಾಖಲು ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ಅಣ್ಣ ಆ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸಿ ವಿಚಾರಣೆ ನಡೆಸಿದ್ದರು ಎಂದರೆ ಗೊತ್ತಿಲ್ಲ. ಈ ನ್ಯಾಯಾಲಯದಲ್ಲಿ ಸದರಿ ದಾವೆಯು ದಿನಾಂಕ 25.02.2022 ರಂದು ಡಿಕ್ರಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಡಿಕ್ರಿದಾರರು ಬಾಕಿ ಕೊಡಬೇಕಾಗಿದ್ದ ರೂ. 50 ಸಾವಿರ ಮೊತ್ತವನ್ನು ಈ ಅಮಲ್ಜಾರಿ ಅರ್ಜಿಯಲ್ಲಿ ಠೇವಣಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ತೀರ್ಪು ಋಣಿಗಳು ಡಿಕ್ರಿಯ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆರ್.ಎಫ್.ಎ. ನಂ. 100326/2022 ನ್ನು ಸಲ್ಲಿಸಿ ಸದರಿ ಅಪೀಲಿನಲ್ಲಿ ನನ್ನ ತಂದೆ, ತಾಯಿ ಮತ್ತು ಅಣ್ಣ ಡಿಕ್ರಿದಾರರಿಂದ ಹೆಚ್ಚುವರಿಯಾಗಿ ರೂ.6 ಲಕ್ಷ ಪಡೆದುಕೊಂಡು ರಾಜಿ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಹೆಚ್ಚುವರಿಯಾಗಿ ರೂ. 6 ಲಕ್ಷ ಪಡೆದುಕೊಂಡರೂ ತೀರ್ಪು ಋಣಿಗಳು ಕ್ರಯಪತ್ರ ಮಾಡಿಕೊಡಲಿಲ್ಲ ಎಂದರೆ ನನಗೆ ಗೊತ್ತಿಲ್ಲ

4. ನಾನು ಎಲ್ಲಾ ಪ್ರಶ್ನೆಗಳಿಗೂ ಗೊತ್ತಿಲ್ಲ ಎಂದು ಹೇಳುತ್ತಿದ್ದು, ಈ ಅಮಲ್ಜಾರಿ ಬಾಕಿ ಇರುವ ಬಗ್ಗೆ ನನಗೆ ಯಾರು ಹೇಳಿದರು? ಎಂದರೆ ನಾನೇ ತಿಳಿದುಕೊಂಡೆ. ಎಲ್ಲಾ ದೃಢೀಕೃತ ದಾಖಲೆಗಳನ್ನು ನಾನೇ ಪಡೆದುಕೊಂಡು ಹಾಜರು ಮಾಡಿದ್ದೇನೆ. ಈ ದಿನ ನಾನು ಮತ್ತು 3 ನೇ ತೀರ್ಪು ರುಣಿ ನನ್ನ ಅಣ್ಣ ಕುಮಾರ ಒಟ್ಟಿಗೆ ಕೋರ್ಟಿಗೆ ಬಂದಿದ್ದೇವೆ ಎಂದರೆ ಅವರ ಪಾಡಿಗೆ ಅವರು ನನ್ನ ಪಾಡಿಗೆ ನಾನು ಬಂದಿದ್ದೇನೆ. ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ದಿನಾಂಕ 28.02.2025 ರಂದು ರಾಜಿಯಾಗಿತ್ತು ಎಂದರೆ ಸುಳ್ಳು. ಪಾಲುವಿಭಾಗಕ್ಕಾಗಿ ನಾನು ಯಾವ ದಿನಾಂಕದಂದು ದಾವೆ ಹಾಕಿದ್ದೇನೆ ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ದಿನಾಂಕ 30.03.2025 ರಂದು ಓ.ಎಸ್. ನಂ. 30/2025 ನ್ನು ದಾಖಲು ಮಾಡಿದ್ದೇನೆ ಎಂದರೆ ಸರಿ. ಆ ದಾವೆಯಲ್ಲಿ ನನ್ನ ತಂದೆ ಮತ್ತು ಅಣ್ಣ ದಿನಾಂಕ 05.07.2025 ರಂದು ಪ್ರತಿವಾದ ಪತ್ರ ಸಲ್ಲಿಸಿದ್ದಾರೆ ಎಂದರೆ ನನಗೆ ಅರ್ಥವಾಗುವುದಿಲ್ಲ. ಆ ದಾವೆಯಲ್ಲಿ ಉಮಾದೇವಿ ಎನ್ನುವವರನ್ನೂ ಕೂಡಾ 3 ನೇ ಪ್ರತಿವಾದಿಯನ್ನಾಗಿ ಮಾಡಿದ್ದೇನೆ ಎಂದರೆ ಸರಿ. ಉಮಾದೇವಿ ನನಗೆ ಹೇಗೆ ಸಂಬಂಧಿಕರು? ಎಂದರೆ ಅವರು ಖರೀದಿ ಮಾಡಿದ್ದಾರೆ. ಅವರು ಸಂಬಂಧಿಕರಲ್ಲ, ಖರೀದಿದಾರರು ಮಾತ್ರ ಎಂದರೆ ಸರಿ. ಉಮಾದೇವಿ ಕೂಡಾ ಇದೇ ಸರ್ವೇ ನಂಬರನಲ್ಲಿ 18 ಸೆಂಟ್ಸ್ ಖರೀದಿ ಮಾಡಿದ್ದಾರೆ. ನಾನು ದಿನಾಂಕ 01.08.2025 ರಂದು ನನ್ನ ದಾವೆಯಲ್ಲಿ ಉಮಾದೇವಿ ಜೊತೆ ಸದರಿ 18 ಸೆಂಟ್ಸ್ ಬಗ್ಗೆ ರಾಜಿ ಮಾಡಿಕೊಂಡಿದ್ದೇನೆ ಎಂದರೆ ಸರಿ. ಉಮಾದೇವಿ ಜೊತೆ ರಾಜಿ ಮಾಡಿಕೊಳ್ಳುವಾಗ ನನಗೆ ಡಿಕ್ರಿದಾರರಿಗೆ 26 ಸೆಂಟ್ಸ್ ಬಗ್ಗೆ ಕ್ರಯದ ಕರಾರು ಮಾಡಿಕೊಟ್ಟ ಗೊತ್ತಿರಲಿಲ್ಲವೇ? ಎಂದರೆ ಗೊತ್ತಿರಲಿಲ್ಲ. ನಾನು ನನ್ನ ವಕೀಲರ ಬಳಿ ಸಲಹೆ ಪಡೆದುಕೊಂಡೇ ಉಮಾದೇವಿ ಜೊತೆ 18 ಸೆಂಟ್ಸ್ ಬಗ್ಗೆ ರಾಜಿ ಮಾಡಿಕೊಂಡಿದ್ದೆ ಎಂದರೆ ಸರಿ. ನನಗೆ ಈ ಅಮಲ್ಜಾರಿ ಅರ್ಜಿಯ ಬಗ್ಗೆ ಯಾರು ಹೇಳಿದರು? ಎಂದರೆ ನನ್ನ ಸೋದರಮಾವನಾದ ಹಾಲೇಶಪ್ಪ ಹೇಳಿದರು. ನಾನು ಈ ಅರ್ಜಿಯಲ್ಲಿ ದಾಖಲೆಗಳನ್ನು ಹಾಜರು ಮಾಡಲು ಪ್ರಕರಣದ ದೃಢೀಕೃತ ಪ್ರತಿಗಳನ್ನು ಸ್ವಂತವಾಗಿ ಪಡೆದುಕೊಂಡಿದ್ದುಂಟೇ? ಎಂದರೆ ಸ್ವಂತವಾಗಿ ಪಡೆದಿಲ್ಲ.

5. ಸರ್ವೇ ನಂ. 53 ಎ ಯಲ್ಲಿ ಒಟ್ಟು ಎಷ್ಟು ಜಮೀನಿದೆ? ಎಂದರೆ 85 ಸೆಂಟ್ಸ್ ಇರುತ್ತದೆ. ನಾನು ರಾಜಿ ಮಾಡಿಕೊಂಡ ಉಮಾದೇವಿಗೆ ಮಾರಾಟ ಮಾಡಿದ 18 ಸೆಂಟ್ಸ್ ಹೊರತುಪಡಿಸಿದರೆ ಸರ್ವೇ ನಂ. 53 ಎ ಯಲ್ಲಿ ಇನ್ನೂ 67 ಸೆಂಟ್ಸ್ ಜಮೀನು ಉಳಿಯುತ್ತದೆ ಎಂದರೆ ಸರಿ. ನಾನು ಪಾಲುವಿಭಾಗ ದಾವೆಯಲ್ಲಿ 1/3 ಹಿಸ್ಸೆಯನ್ನು ಕೋರಿದ್ದೇನೆ ಎಂದರೆ ಸರಿ.

**(ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಿತು).**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಗಣಕೀಕರಿಸಿದೆ)

**ಓ.ಹೇ.ಕೇ. ಸರಿ ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
**ಹೂವಿನ ಹಡಗಲಿ.**